ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 54

ಸದಸ್ಯರ ಹೆಸರು : ಶ್ರೀ ಗೋಪಾಲ ಭಂಡಾರಿ ಹೆಚ್. (ಕಾರ್ಕಳ)

ಉತ್ತರಿಸುವ ಸಚಿವರು : ಶ್ರೀ ಕೆ. ಜನಾರ್ಧನ ರೆಡ್ಡಿ (ಪ್ರವಾಸೋದ್ಯಮ ಮತ್ತು ಮೂಲಭೂತ ಸೌಕರ್ಯಗಳ ಅಭಿವೃದ್ಧಿ ಸಚಿವರು)

ಕ್ರ. ಸಂ.	ಪ್ರಶ್ನೆ	ಉತ್ತರ
ಅ.	ಉಡುಪಿ ಜಿಲ್ಲೆಯಲ್ಲಿ ಹಾಗೂ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಪ್ರವಾಸೋದ್ಯಮ ಅಭಿವೃದ್ಧಿಗೆ ಹಾಕಿಕೊಂಡ ಯೋಜನೆಗಳು ಮತ್ತು ಅದಕ್ಕೆ ಒದಗಿಸಿರುವ ಅನುದಾನಗಳೆಷ್ಟು;	ರಾಜ್ಯದ ಕರಾವಳಿಯ ಪ್ರಮುಖ ಜಿಲ್ಲೆಗಳಾದ ದಕ್ಷಿಣ ಕನ್ನಡ ಹಾಗೂ ಉಡುಪಿ ಜಿಲ್ಲೆಗಳಲ್ಲಿ ಇಲಾಖೆಯು ಹಮ್ಮಿಕೊಂಡಿರುವ ಪ್ರವಾಸಿ ಅಭಿವೃದ್ಧಿ ಯೋಜನೆಗಳ ವಿವರಗಳು ಕೆಳಗಿನಂತಿವೆ. **ಅ. ದಕ್ಷಿಣ ಕನ್ನಡ ಜಿಲ್ಲೆ** 1. ಪಿಲಿಕುಲದಲ್ಲಿ ಸಂಸ್ಕೃತಿ ಗ್ರಾಮ ಅಭಿವೃದ್ಧಿ ಯೋಜನೆಗಾಗಿ ರೂ. 275,00 ಲಕ್ಷಗಳು, ಆಯುರ್ವೇದ ಥೆರಪಿ ಕೇಂದ್ರಕ್ಕಾಗಿ ರೂ. 50.00 ಲಕ್ಷಗಳು ಹಾಗೂ ವನ್ಯಜೀವಿ ವಿಭಾಗ ಅಭಿವೃದ್ಧಿಗಾಗಿ ರೂ. 55.00 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ. **2. ಪಣಂಬೂರು ಬೀಚ್ ಬಳಿ** i) ಹೊನಲು ಬೆಳಕು ಅಳವಡಿಕೆ ರೂ. 39.66 ಲಕ್ಷಗಳು. ii) ವಾಹನ ನಿಲ್ದಾಣ, ತೂಗುಸೇತುವೆ ಕಾಮಗಾರಿಗಳಿಗಾಗಿ ರೂ. 51.03 ಲಕ್ಷಗಳು. iii) ಉಪಹಾರಗೃಹ ಮತ್ತು ಶೌಚಾಲಯ ನಿರ್ಮಾಣಕ್ಕಾಗಿ ರೂ. 24.75 ಲಕ್ಷಗಳು. 3. ಕರಾವಳಿ ಪ್ರವಾಸಿ ವೃತ್ತದ ಅಭಿವೃದ್ಧಿ ಯೋಜನೆ ಅಡಿ ಪಣಂಬೂರು, ಉಲ್ಲಾಳ ಹಾಗೂ ತಣ್ಣೀರುಬಾವಿ ಕಡಲತೀರಗಳ ಅಭಿವೃದ್ಧಿಗಾಗಿ ಕೇಂದ್ರ ಸರ್ಕಾರವು ತಲಾ ರೂ.76.80ಲಕ್ಷಗಳನ್ನು ಮಂಜೂರು ಮಾಡಿರುತ್ತದೆ.

		4. 2008-09ನೇ ಸಾಲಿನ ಆಯವ್ಯಯದಲ್ಲಿ ಮಂಗಳೂರಿನಲ್ಲಿ ಪ್ರವಾಸೋದ್ಯಮ ಅಭಿವೃದ್ಧಿಗಾಗಿ ರೂ.463.00 ಲಕ್ಷಗಳನ್ನು ಕಾದಿರಿಸಲಾಗಿದೆ. ಮಂಗಳೂರಿನಲ್ಲಿ ಅಕ್ವಾಮರೀನ್ ಪಾರ್ಕ್, ಗಾಲ್ಫ್ ಕೋರ್ಸ್ ಹಾಗೂ ರೋಪ್ ವೇಗಳನ್ನು ಖಾಸಗಿ ಸಹಭಾಗಿತ್ವ ದಲ್ಲಿ ಕೈಗೊಳ್ಳಲು ಕೆ.ಎಸ್.ಐ.ಐ.ಡಿ.ಸಿ.ಗೆ ಬಿಡುಗಡೆ ಮಾಡಲಾಗುವುದು. ಈ ಸಂಬಂಧ ಅಧ್ಯಯನ ನಡೆಸಲು ರೂ.97.00ಲಕ್ಷಗಳನ್ನು ಈಗಾಗಲೇ ಕೆ.ಎಸ್.ಐ.ಐ.ಡಿ.ಸಿ.ಗೆ ಬಿಡುಗಡೆ ಮಾಡಲಾಗಿದೆ. The following tourism infrastructure projects facilities have been taken up at the coastal districts Dakshina Kannada & Udupi. **A. Dakshina Kannada** 1. Devt. of Heritage Village at Pilikula Nisargadhama at a cost of Rs. 275.00 lakhs. Ayurvedic Therapy Centre Rs.50.00 lakhs and Devp. of Wildlife Division Rs. 55.00lakhs have been released to District Administration. **2) At Panambur Beach :** i. Providing Flood lighting to beach Rs.39.66 lakhs. ii. Parking Place and Hanging Bridge Rs.51.03 lakhs. iii. Restaurant and Toilet blocks Rs.24.75lakhs have been provided.

		3. Under the Coastal Circuit Devt. the Central Government has sanctioned Rs. 76.80lakhs each for the Development of beaches at Panambur. Ullal Thannerubavi. 4. Rs. 463.00 lakhs have been enrmarked in the allocation of 2008-09for the Devt. of the Aqua Marine Park, Golf course and Ropeway will be taken up under PPP through KSIIDC. An amount of Rs. 97.oo lakhs has been released to KSIIDC for preparing study report. **ಆ) ಉಡುಪಿ ಜಿಲ್ಲೆ** 1. ಕಾಪು ದ್ವೀಪಸ್ಥಂಭ ಪ್ರದೇಶದಲ್ಲಿ ಪ್ರವಾಸಿ ಸೌಕರ್ಯಕ್ಕಾಗಿ ರೂ. 55.00 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ. 2. ಮಿಯ್ಯಾರು ಗ್ರಾಮದ ಕಂಬಳ ಕ್ರೀಡೆ ಪ್ರದೇಶದಲ್ಲಿ ಪ್ರವಾಸಿ ಅಭಿವೃದ್ಧಿಗಾಗಿ ರೂ.83.99ಲಕ್ಷಗಳನ್ನು ನೀಡಲಾಗಿದೆ. 3. ಕಾರ್ಕಳದ ಗೊಮ್ಮಟ ಬೆಟ್ಟದ ಸಮೀಪ ಯಾತ್ರಿನಿವಾಸಕ್ಕಾಗಿ ರೂ. 93.00 ಲಕ್ಷಗಳನ್ನು ನೀಡಲಾಗಿದೆ. 4. ತ್ರಾಸಿ, ಸೈಂಟ್ ಮರೀಸ್ ದ್ವೀಪ ಹಾಗೂ ಮಲ್ಪೆ ಕಡಲು ತೀರಗಳಲ್ಲಿ ಪ್ರವಾಸಿ ಅಭಿವೃದ್ಧಿಗಾಗಿ ತಲಾ ರೂ. 76.80ಲಕ್ಷಗಳನ್ನು ಕೇಂದ್ರ ಸರ್ಕಾರ ಬಿಡುಗಡೆ ಮಾಡಿರುತ್ತದೆ. 5. ಉಡುಪಿ ಜಿಲ್ಲೆಯ ಆನೆಜರಿ, ಸೀತಾನದಿ ಇತ್ಯಾದಿ ಸ್ಥಳಗಳನ್ನೊಳಗೊಂಡಂತೆ ಪರಿಸರ ಪ್ರವಾಸೋದ್ಯಮ

		ಅಭಿವೃದ್ಧಿಗಾಗಿ ಕೇಂದ್ರ ಸರ್ಕಾರ ಅನುದಾನವನ್ನು ಬಿಡುಗಡೆ ಮಾಡಿದ್ದು ಸದರಿ ಅಭಿವೃದ್ಧಿಗಾಗಿ ಕೇಂದ್ರ ಸರ್ಕಾರವು ಅನುದಾನವನ್ನು ಬಿಡುಗಡೆ ಮಾಡಿದ್ದು ಸದರಿ ಅಭಿವೃದ್ಧಿ ಯೋಜನೆಗಳನ್ನು ಅರಣ್ಯ ಇಲಾಖೆಯ ವತಿಯಿಂದ ಕೈಗೊಳ್ಳಲಾಗುವುದು. 6. ಉಡುಪಿ ಜಿಲ್ಲೆಯ ಕಾಪು, ಮಲ್ಪೆ ಹಾಗೂ ಕೃಷ್ಣಮಠ ವಾಹನ ನಿಲ್ದಾಣ, ಉಡುಪಿ ಪ್ರದೇಶಗಳಲ್ಲಿ ಶೌಚಾಲಯ ಹಾಗೂ ಕುಡಿಯುವ ನೀರಿನ ಯೋಜನೆಯನ್ನು ತಲಾ 11.78 ಲಕ್ಷಗಳ ಅಂದಾಜು ವೆಚ್ಚದಲ್ಲಿ ನಿರ್ಮಿಸಲಾಗುತ್ತಿದೆ. **B. Udupi District** 1. A sum of Rs. 55.00lakhs has been released for Devt. of tourist facilities at Kapu. 2. A sum of Rs. 83.99 lakhs has been released for Devt. of tourist facilities at Miyaru Kambala Festivals. 3. Rs. 93.00 lakhs has been released for construction of Yatrinivas at Karkala. 4. Central Government has released Rs. 76.80 lakhs each for Devt. of beaches such as Thrasi, St.Mary's Irland and Malpe. 5. Central Assistance has been availed for Devt. of tourist facilities at Aneyan, Seethanadi in Udupi District. The project will be implemented through Forest Dept.

		6. Toilet and Drinking watr facilities has been taken up at Kapu, Malpe and Krishna Mutt in Udupi at the cost of Rs. 11.78 lakhs each.
ಆ.	ಈ ಎರಡು ಜಿಲ್ಲೆಗಳಲ್ಲಿ ಗುರುತಿಸಲ್ಪಟ್ಟ ಪ್ರವಾಸೋದ್ಯಮ ಕೇಂದ್ರಗಳು ಯಾವುವು;	ಈ ಎರಡು ಜಿಲ್ಲೆಗಳಲ್ಲಿ ಪ್ರವಾಸೋದ್ಯಮ ನೀತಿಯಡಿಯಲ್ಲಿ ಗುರುತಿಸಲಾಗಿರುವ ಪ್ರವಾಸಿ ಕೇಂದ್ರಗಳು ಕೆಳಗಿನಂತಿವೆ. ಕಾರ್ಕಳ, ಮೂಡುಬಿದ್ರೆ, ಉಡುಪಿ, ಮಲ್ಪೆ, ಕಾಪು, ಬಿಜಾಪುರ, ಮರವಂತೆ, ಕೊಲ್ಲೂರು, ಸೂರತ್‌ಕಲ್, ಪಣಂಬೂರು, ಉಲ್ಲಾಳ, ಸೋಮೇಶ್ವರ, ಕಟೀಲ್, ಧರ್ಮಸ್ಥಳ, ವೇಣೂರು, ಸುಬ್ರಹ್ಮಣ್ಯ, ಬೇಂದ್ರೆ ತೀರ್ಥ, ಶಿರಾಡಿ ಹಾಗೂ ಉಪ್ಪಿನಂಗಡಿ. Under the Tourism Policy the following tourist palceshave been identified in both the districts : Karkala, Mudabidre, Udupi, Malpe, Kapu, Bijapura, Maravante, Kollur, Suratkal, Panambur, Ullal, Someshwara, Katil, Dharmastala, Venur, Subramanya, Bendre Thirtha, shiradi and Uppinangadi.
ಇ.	ಅವುಗಳ ಅಭಿವೃದ್ಧಿಯ ಬಗ್ಗೆ ಏನೇನು ಯೋಜನೆಗಳನ್ನು ರೂಪಿಸಿಕೊಳ್ಳಲಾಗಿದೆ;	ಪ್ರಶ್ನೆ ಸಂಖ್ಯೆ "ಅ" ರಲ್ಲಿ ವಿವರಿಸಿರುವಂತೆ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಲಾಗುತ್ತಿದೆ. As explained in Question. No. "ಅ"
ಈ.	ಕಾರ್ಕಳದಲ್ಲಿ ಬಾಹುಬಲಿ ಬೆಟ್ಟದ ಬಳಿ ಯಾತ್ರಿ ನಿವಾಸ ರಚಿಸುವ ಬಗ್ಗೆ ಕೈಗೊಂಡ ಕ್ರಮಗಳೇನು;	ಭಗವಾನ್ ಬಾಹುಬಲಿ ಬೆಟ್ಟದ ಬಳಿ ಸರ್ವೆ ನಂ. 250/6 ರಲ್ಲಿ 0.85 ಎಕರೆ ವಿಸ್ತೀರ್ಣ ಜಾಗವನ್ನು ಯಾತ್ರಿ ನಿವಾಸ ನಿರ್ಮಾಣಕ್ಕಾಗಿ ಗುರುತಿಸಲಾಗಿದ್ದು ಇದರ

		ನಿರ್ಮಾಣಕ್ಕಾಗಿ ರೂ. 93.00ಲಕ್ಷಗಳನ್ನು 2007-08ನೇ ಸಾಲಿನಲ್ಲಿ ಜಿಲ್ಲಾಧಿಕಾರಿಗಳಿಗೆ ಬಿಡುಗಡೆ ಮಾಡಲಾಗಿದೆ. Rs.93.00 lakhs has been released to Deputy Commissioner, D. K. District for construction of Yatrinivas near Bahubali Hill in Karkala for which 0.85 acres land has identified in Survey No.250/6.
ಊ.	ಅದಕ್ಕೆ ಒದಗಿಸಲಾದ ಕೇಂದ್ರ ಮತ್ತು ರಾಜ್ಯದ ಅನುದಾನವೆಷ್ಟು;	ಈ ಯೋಜನೆಗೆ ರೂ.93.00ಲಕ್ಷಗಳನ್ನು ರಾಜ್ಯ ಸರ್ಕಾರದ ಅನುದಾನದಿಂದ 2007-08ನೇ ಸಾಲಿನಲ್ಲಿ ಒದಗಿಸಲಾಗಿದೆ. An amount of Rs. 93.00 lakhs has been released from State Funds during 2007-08.